"ಆರ್ಯರ ಕಣಿವೆ? ಅಂದರೆ ಅಲ್ಲಿ ಇನ್ನೂ ಆರ್ಯರು ನೆಲೆಸಿರುವರೆ" ಮೀರ್ ಬಿಲಾಲ್ ಹೇಳಿದ್ದನ್ನು ನಂಬಲಾರದೆ ಕೇಳಿದೆ.

"ಹೌದು. ವೇದಕಾಲದ ಮೂಲ ಆರ್ಯರ ಶುದ್ಧ ರಕ್ತ ಹೊತ್ತ ಈ ಜನ ಕಾಶ್ಮೀರದ ಆ ದುರ್ಗಮ ಕಣಿವೆಯ ದಾಹ್, ಹನು, ಗಾರ್ಕನ್ ಎಂಬಿಂತಹ ನಾಲ್ಕೈದು ಹಳ್ಳಿಗಳಲ್ಲಿ, ಇನ್ನೂ ನೆಲೆಸಿದ್ದಾರೆ ಎಂದು ಹೇಳಲಾಗುತ್ತಿದೆ."

"ಅಂದರೆ, ನಮ್ಮ ವೇದಗಳ ರಚನೆಗೆ ಕಾರಣವಾದ, ಸೋಮರಸದಂತಹ ಅದ್ಭುತ ಪಾನೀಯವನ್ನು ತಯಾರಿಸುತ್ತಿದ್ದ, ಗೋವುಗಳನ್ನು ವಿಶೇಷವಾಗಿ ಪೂಜಿಸುತ್ತಿದ್ದ, ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದು ಪ್ರಕೃತಿಯ ಹಲವು ಶಕ್ತಿಗಳನ್ನು ಅವಗಾಹನೆಗೈಯಲೆಂದು ವೇದಘೋಷಗಳನ್ನು ಪಠಿಸಿ ಪೂಜೆ ಸಲ್ಲಿಸುತ್ತಿದ್ದ ವೇದ ಪುರುಷರು ಈಗಲೂ ಆ ಕಣಿವೆಯಲ್ಲಿ ಇರುವರೆ?"

ಅನುಮಾನಕ್ಕಿಂತ ಹೆಚ್ಚಾಗಿ ಆಶ್ಚರ್ಯ ತುಂಬಿದ್ದ ನನ್ನ ಪ್ರಶ್ನೆಗೆ ಬಿಲಾಲ್ ಹೌದೆಂದು ತಲೆಯಾಡಿಸಿ ಹೇಳಿದರು.

"ವಿಚಿತ್ರವೆಂದರೆ ಅವರು ತಮ್ಮ ವಂಶದ ಅಥವಾ ತಮ್ಮ ಕುಲರಕ್ತದ ಶುದ್ಧತೆಯನ್ನು ಕಾಪಾಡಿಕೊಳ್ಳಲೆಂದೆ ಇತರರೊಂದಿಗೆ ಸಂಬಂಧ ಬೆಳೆಸದೆ ಅವರವರಲ್ಲಿಯೇ ಮದುವೆಯಾಗುತ್ತಾರಂತೆ." ಅದನ್ನು ಕೇಳಿ ನನ್ನ ಕುತೂಹಲ ಇನ್ನೂ ಹೆಚ್ಚಾಯಿತು.

ಬಿಲಾಲ್ ಹೇಳುವುದು ನಿಜವೇ ಆಗಿದ್ದಲ್ಲಿ ಆ ಹಳ್ಳಿಗಳಿಗೆ ಹೇಗೋ ಹೋಗಿ ಅಲ್ಲಿನ ಜನರನ್ನು ಕಂಡು ಮಾತನಾಡಿಸುವ ಅವಕಾಶ ನಮಗೆ ಸಿಕ್ಕಿರುವುದು ಅದೃಷ್ಟವೇ ಎಂದು ಪರಿಗಣಿಸಿ ಮತ್ತೂ ಉತ್ಸುಕನಾದೆ. ಕಾರಣ ಆಗ ನಾವಿದ್ದ ಸ್ಥಳದಿಂದ ಆ ಕಣಿವೆಗೆ ಕೇವಲ ಮೂರುನಾಲ್ಕು ಗಂಟೆಗಳ ಪಯಣ! ಭಾರತದ ಮೂರೂ ವಿಜ್ಞಾನ ಪರಿಷತ್ತುಗಳು ಒಟ್ಟಿಗೆ ಸೇರಿ, ಕಾಲೇಜಿನ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಒಲವು ಮೂಡಿಸಿ, ಅವರಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಂಶೋಧನಾ ಸ್ಫೂರ್ತಿ ತುಂಬಲೆಂದು ದೇಶದ ಮೂಲೆ ಮೂಲೆಗಳಲ್ಲಿ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳ ಸರಣಿಯನ್ನು ಪ್ರತಿವರ್ಷವೂ ಪ್ರಾಯೋಜಿಸುತ್ತವೆ. ಅಂತಹ ಒಂದು ಉಪನ್ಯಾಸ ಕಾರ್ಯಕ್ರಮವನ್ನು 2017ರ ಜೂನ್‌ನಲ್ಲಿ, ಕಾಶ್ಮೀರ ವಿಶ್ವವಿದ್ಯಾಲಯದ ಒಂದು ಶಾಖೆಯಾದ ಕಾರ್ಗಿಲ್‌ನ ವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಜನ್ಸ್ಕಾರ್ ಮತ್ತು ಕಾರ್ಗಿಲ್‌ನ ಪ್ರಾಂತ್ಯಗಳ ಗಡಿಭಾಗದಲ್ಲಿರುವ, ವಿಶಾಲ ಕಣಿವೆಯೊಂದರ ಸುಂದರ ಪರಿಸರದ ಮಧ್ಯ ನಿರ್ಮಿಸಲಾಗಿರುವ ಈ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ಆ ಕಾರ್ಯಕ್ರಮಕ್ಕೆ ಉಪನ್ಯಾಸಕನಾಗಿ ವೀಣಾ ಮತ್ತು ಸಹೋದ್ಯೋಗಿ ಡಾ. ಉಮಾಶಂಕರ್ ಜೊತೆ ಹೋಗಿದ್ದೆ. ಶ್ರೀನಗರದಿಂದ 200 ಕಿ.ಮೀ ದೂರದಲ್ಲಿರುವ ಈ ಶಾಖೆ, ನಗರ ಪ್ರದೇಶದ ಪ್ರಭಾವದಿಂದ ಇನ್ನೂ ದೂರವೆ ಉಳಿದಿದ್ದರೂ ಅಲ್ಲಿ ಬಹುಪಾಲು ಹೆಣ್ಣುಮಕ್ಕಳೆ ವಿದ್ಯಾಭ್ಯಾಸ ಮಾಡುತ್ತಿರುವುದನ್ನು ಕಂಡು ನಮ್ಮೆಲ್ಲರಿಗೂ ಅತೀವ ಸಂತೋಷವಾಗಿತ್ತು. ವಿಜ್ಞಾನದಲ್ಲಿ ಅವರೆಲ್ಲರೂ ತೋರಿದ ಉತ್ಸಾಹದಿಂದ ಮೂರು ದಿನಗಳ ಕಾರ್ಯಕ್ರಮ ಅತ್ಯಂತ ಹುರುಪಿನಿಂದಲೆ ನಡೆದು, ನಮಗೆಲ್ಲರಿಗೂ ಖುಷಿ ಕೊಟ್ಟಿತ್ತು ಕೂಡ. ಕಡೆಯದಿನ, ಕಾರ್ಗಿಲ್‌ನಿಂದ ಲೆಹ್‌ಗೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಹಿಂದಿರುಗುವ ಯೋಜನೆಯನ್ನು ಚರ್ಚಿಸುತ್ತಿದ್ದಂತೆ, ಆತಿಥ್ಯವನ್ನು ನೋಡಿಕೊಳ್ಳುತ್ತಿದ್ದ ಡಾ. ಮೀರ್ ಬಿಲಾಲ್, ದಾರಿಯಲ್ಲಿ ಏನೇನು ನೋಡಬಹುದೆಂದು ಸೂಚಿಸುತ್ತ 'ಆರ್ಯ ಕಣಿವೆ'ಯ ಬಗ್ಗೆ ಹೇಳಿದಾಗ ನಮ್ಮೆಲ್ಲರಲ್ಲಿ